# ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಡಗಲಿ.

**ಸಿ.ಸಿ. ನಂಃ 448/2021**

**ಸಿ.ಡಬ್ಲ್ಯೂಃ 08 ಪಿಡಬ್ಲ್ಯೂಃ02**

ಸಾಕ್ಷಿದಾರರ ಹೆಸರುಃ ಕಲ್ಲಯ್ಯ ತಂದೆಃಬಸಯ್ಯ
ವಯಸ್ಸುಃ 47 ವರ್ಷ
ಉದ್ಯೋಗಃ ಬಸ್ಸ ನಿರ್ವಾಹಕರು ಹಾವೇರಿ ಬಸ್ಸ ಡಿಪೋ,
ಸಾಕೀನಃ ಮರೋಳ ಹಾವೇರಿ ತಾಲ್ಲೂಕು ಮತ್ತು ಜಿಲ್ಲೆ.

ದಿಃ **02-12-2025** ರಂದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಭೋಧಿಸಲಾಯಿತು.
ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರವರಿಂದ;

**ನಾನು ಸುಮಾರು 18 ವರ್ಷಗಳಿಂದ ಬಸ್ಸ ಕಂಡಕ್ಟರ ಆಗಿ ಕೆಲಸ ಮಾಡುತ್ತಿದ್ದೇನೆ.**

**02. ನನಗೆ ಆರೋಪಿತನ ಪರಿಚಯ ಇರುತ್ತದೆ. ಚಾ.ಸಾ.01 ರಿಂದ 07 ಮತ್ತು 10 ರಿಂದ 13 ರವರ ಪರಿಚಯ ನನಗೆ ಇರುವುದಿಲ್ಲ.**

**03. ಸುಮಾರು 3-4 ವರ್ಷಗಳ ಹಿಂದೆ ನಾನು ಹಡಗಲಿ ಡಿಪೋದಲ್ಲಿ ಬಸ್ಸ ನಿರ್ವಾಹಕರಾಗಿ ಕೆಲಸ ಮಾಡುತ್ತಿದ್ದಾಗ ಬಸ್ಸ ನಂಬರ KA.35.F.179 ನೇದ್ದರಲ್ಲಿ ನಾನು ಕಂಡಕ್ಟರ ಆಗಿ ಈ ಪ್ರಕರಣದ ಆರೋಪಿ ಚಾಲಕರಾಗಿ ಕರ್ತವ್ಯಕ್ಕೆ ನೇಮಕಗೊಂಡಿದ್ದು ಹಡಗಲಿಯಿಂದ ಹಾವೇರಿಗೆ ಹಿರೇಹಡಗಲಿ ಮಾರ್ಗವಾಗಿ ಹೋಗುತ್ತಿದ್ದಾಗ ಮಧ್ಯಾಹ್ನ ಸುಮಾರು 02.30-03.00 ಗಂಟೆ ಸುಮಾರಿಗೆ ಗಿರಿಯಾಪುರ ಮಠದ ಹತ್ತಿರ ಜೋರಾದ ಶಬ್ಧ ಕೇಳಿ ಬಂತು ಆಗ ಬಸ್ಸ ಚಾಲಕನಾದ ಆರೋಪಿಯು ಬಸ್ಸನ್ನು ನಿಲ್ಲಿಸಿದ್ದು ನಾನು ತಕ್ಷಣ ಬಸ್ಸನಿಂದ ಕೆಳಗೆ ಇಳಿದು ನೋಡಲಾಗಿ ಒಬ್ಬ ಅಜ್ಜನಿಗೆ ತಲೆಗೆ ಗಾಯಗಳಾಗಿ ರಸ್ತೇಗೆ ಬಿದ್ದಿದನು. ನಂತರ ಒಂದು ಓಮಿನಿ ವಾಹನ ಬಂದಿದ್ದು ಅದರಲ್ಲಿ ಗಾಯಾಳುವನ್ನು ನಾನು ಮತ್ತು ಆರೋಪಿ ಸೇರಿ ಹಿರೇಹಡಗಲಿ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗಾಗಿ ಕರೆದುಕೊಂಡು ಹೋಗಿರುತ್ತೇವೆ. ಸದರಿ ಅಪಘಾತವು ಯಾರ ತಪ್ಪಿನಿಂದ ಆಗಿರುತ್ತದೆ ಎಂದು ನಾನು ನೋಡಿರುವುದಿಲ್ಲ. ನಾನು ಯಾವುದೇ ಅಪಘಾತ ನೋಡಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ, ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ.**

(ಈ ಹಂತದಲ್ಲಿ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದಾರೆ. ಆಲಿಸಿ ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ ಸಹಾಯಕ ಸರಕಾರಿ ಅಭಿಯೋಜಕರವರಿಂದ ;</u>

**04.** ದಿನಾಂಕ : **22-04-2021** ರಂದು **KSRTC** ಬಸ್ಸ ನಂಬರ **KA.35.F.0179** ನೇದ್ದರ ನಾನು ನಿರ್ವಾಹಕನಾಗಿ ಆರೋಪಿತನು ಚಾಲಕನಾಗಿ ನೇಮಕಗೊಂಡಿದ್ದೇವು ಎಂದರೆ ಸರಿ. ಸದರಿ ದಿನದಂದು ಮಧ್ಯಾಹ್ನ **02.45** ಗಂಟೆ ಸುಮಾರಿಗೆ ಹಾವೇರಿಯಿಂದ ಹಡಗಲಿಗೆ ಹೊಳಲು, ಹಿರೇಹಡಗಲಿ ಮಾರ್ಗವಾಗಿ ನಮ್ಮ ಬಸ್ಸನ್ನು ಚಲಾಯಿಸುತ್ತಿದ್ದಾಗ ಗೀರಿಯಾಪುರ ಮಠದ ಕ್ರಾಸ ಹಳ್ಳದ ಹತ್ತಿರ ಹೋಗುತ್ತಿದ್ದಾಗ ಎದುರುಗಡೆಯಿಂದ ನಮ್ಮ ಬಸ್ಸು ರಸ್ತೇ ದಾಟುತ್ತಿದ್ದ ಮೃತ ದೊಡ್ಡ ಹನುಮಂತನಿಗೆ ನಮ್ಮ ಬಸ್ಸಿನ ಚಾಲಕನಾದ ಆರೋಪಿತನು ಅತೀ ವೇಗ ಮತ್ತು ನಿರ್ಲಕ್ಷತನದಿಂದ ಚಲಾಯಿಸಿಕೊಂಡು ಡಿಕ್ಕಿ ಪಡೆಸಿರುತ್ತಾನೆ ಎಂದರೆ ಸಾಕ್ಷಿಯು ನಾನು ನೋಡಿರುವುದಿಲ್ಲ ನಾನು ಬಸ್ಸಿನಲ್ಲಿ ವೇಬಿಲ್ಲನಲ್ಲಿ ನಮೂದು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ದೊಡ್ಡ ಹನುಮಪ್ಪನಿಗೆ ಮಧ್ಯಾಹ್ನ **02.45** ಗಂಟೆಗೆ ಡಿಕ್ಕಿ ಪಡೆಸಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಅಪಘಾತದಿಂದ ದೊಡ್ಡ ಹನುಮಪ್ಪನಿಗೆ ತಲೆಗೆ, ಬಲಮೊಣಕಾಲು ಹತ್ತಿರ ಹಾಗೂ ಎಡಗಾಲು ಹೆಬ್ಬರಳಿಗೆ ತೀವ್ರ ಸ್ವರೂಪದ ರಕ್ತಗಾಯಗಳಾಗಿ ಹಿರೇಹಡಗಲಿ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಸದರಿ ಅಪಘಾತವು ಆರೋಪಿತನ ತಪ್ಪಿನಿಂದ ಘಟಿಸಿರುವುದಾಗಿ ಮತ್ತು ಚಾ.ಸಾ.**01** ರವರು ಸದರಿ ಅಪಘಾತದ ಕುರಿತು ಪೊಲೀಸರಿಗೆ ದೂರು ಸಲ್ಲಿರುವುದಾಗಿ ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ನಿರಾಕರಿಸಿದ ಹೇಳಿಕೆಯನ್ನು ನಿ.ಪಿ.**02** ಎಂದು ಗುರುತಿಸಲಾಯಿತು. ಎಲ್ಲಾ ವಿಚಾರ ಗೊತ್ತಿದ್ದರೂ ಸಹ ಆರೋಪಿತನು ನನ್ನ ಸಹೋದ್ಯೋಗಿ ಆಗಿರುವುದರಿಂದ ಆತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿ ಪರ ವಕೀಲರಿಂದ ಇರುವುದಿಲ್ಲ.</u>

<u>ಮರುವಿಚಾರಣೆಃ</u> ಇಲ್ಲ

(ಸಾಕ್ಷಿಯ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ, ನನ್ನ ಸಮಕ್ಷಮ

**Sd/-**

(ಶ್ರೀಮತಿ ಅಕ್ಷತಾ ಟಿ.)
ದಿವಾಣಿ ನ್ಯಾಯಾಧೀಶರು ಮತ್ತು ನ್ಯಾಯಿಕ
ದಂಡಾಧಿಕಾರಿಗಳು., ಹಡಗಲಿ.